**II**<u>**ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ**</u>

**OS No.1357/2012**
**DW.1**

<u>ದಿನಾಂಕಃ **30-06-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>
<u>ಮುಂದುವರೆದ ಮುಖ್ಯವಿಚಾರಣೆ ಪ್ರತಿವಾದಿಪರ ಶ್ರೀಃ **DKK** ವಕೀಲರಿಂದ.</u>

ಮೂಲ ದಾವಾ ನಂಬರ 1339/14 ನೇದರ ವಾದ ಪತ್ರದ ಮತ್ತು ಪ್ರತಿವಾದ ಪತ್ರದ ದೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಡಿ-6 ಮತ್ತು 7 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ವಾದಿಪರ ಶ್ರೀಃ **ABC** ವಕೀಲರಿಂದ</u>

**ಸಾಕ್ಷಿಗೆ ಮರಾಠಿ ಭಾಷೆ ಬರುತಿದ್ದು ಕನ್ನಡ ಭಾಷೆ ಅರ್ಥವಾಗದ ಕಾರಣ ವಕೀಲರಾದ ಶ್ರೀ:VDNರವರನ್ನು ನೇಮಿಸಿ ಮರಾಠಿ ಭಾಷೆಗೆ ತರ್ಜುಮೆ ಮಾಡಿ ನಂತರ ಕನ್ನಡಕ್ಕೆ ಭಾಷಾಂತರಿಸಿಕೊಂಡು ಹೇಳಿಕೆ ಪಡೆದುಕೊಳ್ಳಲಾಯಿತು. ಪ್ರತಿವಾದಿಯು ತರ್ಜುಮೆದಾರರರಿಗೆ ತರ್ಜುಮೆದಾರರ ಫೀ ರೂ.300/- ನೀಡಲು ಅದೇಶಿಸಿದೆ.**

ಮೂಲ ದಾವಾ ನಂ.1339/2014ನೇದನ್ನು ಬಾಲಕೃಷ್ಣ ಮುಚಂಡಕರ ಹಾಗೂ ಅವರ ಸಹೋದರ ಮತ್ತು ತಾಯಿ ಹಾಕಿದ ದಾವೆ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆ ನೋಟಿಸ್/ಸಮನ್ಸ 2014ರಲ್ಲಿ ಬಂದಿರುತ್ತದೆ ಎಂದರೆ ಸರಿ. 2014ರಲ್ಲೆಯೇ ವಕೀಲರನ್ನು ಆ ದಾವೆಯಲ್ಲಿ ನೇಮಿಸಿಕೊಂಡಿರುತ್ತೇನೆ. ಸದರಿ ದಾವೆಯಲ್ಲಿ A.L.ಸಂದ್ರಿಮನಿ ವಕೀಲರನ್ನು ನಮ್ಮ ಪರವಾಗಿ ನೇಮಿಸಿಕೊಂಡಿರುತ್ತೇವೆ ಎಂದರೆ ಸರಿ. ಪ್ರಸ್ತುತ ದಾವೆ ನಂ.1357/2012ರಲ್ಲಿ ಸದರಿ A.L.ಸಂದ್ರಿಮನಿ ವಕೀಲರು ನಮ್ಮ ಪರವಾಗಿ ಇರುತ್ತಾರೆ ಎಂದರೆ ಸರಿ. ಮೂಲ ದಾವಾ ನಂ.1339/2014ರ ವಾದ ಪತ್ರ ಮತ್ತು ಪ್ರತಿವಾದ ಪತ್ರದಲ್ಲಿನ ಸಂಗತಿಗಳನ್ನು ಪ್ರಸ್ತುತ ದಾವೆ ನಂ.1357/2012ನೇದರಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಪ್ರಸ್ತುತ ದಾವೆ ನಂ.1357/2012 ನೇದರಲ್ಲಿ ನಾನು A.L.ಸಂದ್ರಿಮನಿ ವಕೀಲರ ಮೂಲಕ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. 2014ರಿಂದ ಇಲ್ಲಿಯವರೆಗೂ ನಿಡಿ.6 ಮತ್ತು 7ರ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಮೂಲ ದಾವಾ ನಂ.1339/2014 ನೇದರ ದಾವಾ ಸ್ವತ್ತುಗಳನ್ನು ಭೀಮ್ಸು ಸಂತಾಜಿರವರು ದಿನಾಂಕಃ22-09-1955ರಲ್ಲಿ ಬಾಳಪ್ಪ

ಮುಚ್ಚಂಡಿರವರವರಿಗೆ ಖರೀದಿಗೆ ನೀಡಿರುತ್ತಾರೆ ಎಂದರೆ ಸರಿ. 1955ರಿಂದ ಇಲ್ಲಿಯವರೆಗೆ ಬಾಳಪ್ಪ ಮುಚ್ಚಂಡಿರವರಿಗೆ ಮತ್ತು ಅವರ ವಾರಸುದಾರರ ಹೆಸರನಲ್ಲಿ ಕಂದಾಯ ದಾಖಲೆಗಳು ಇರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕಬ್ಜ ನಮ್ಮ ಹತ್ತಿರ ಇರುತ್ತದೆ ಎಂದು ನುಡಿಯುತ್ತಾರೆ. ಕಬ್ಜ ನಮ್ಮ ಹತ್ತಿರ ಇದೆ ಎಂದು ತೋರಿಸಲು ಪ್ರಸ್ತುತ ದಾವೆಯಲ್ಲಿ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು 4ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ನ್ಯಾಯಾಲಯದಿಂದ ದಾಖಲೆಗಳನ್ನು ತಂದು ಈ ನ್ಯಾಯಲಯಕ್ಕೆ ಹಾಜರು ಪಡಿಸಲು ಏನಾದರು ತೊಂದರೆ ಇದೆಯ ಎನ್ನುವ ಪ್ರಶ್ನೆಗೆ ಸಾಕ್ಷಿಯು ಆ ದಾವೆ ಮತ್ತು ಈ ದಾವೆಗೆ ಸಂಬಂಧವಿಲ್ಲದ ಕಾರಣ ಹಾಜರು ಪಡಿಸುವುದಿಲ್ಲ ಎಂದು ನುಡಿಯುತ್ತಾರೆ. ಮೂಲ ದಾವಾ ನಂ.1339/2014 ಹಾಗೂ ಪ್ರಸ್ತುತ ದಾವೆ ನಂ.1357/2012ನೇದರ ವಿವಾದಿತ ಆಸ್ತಿಗಳು ಬೇರೆ ಬೇರೆ ಆಗಿರುತ್ತವೆ ಎಂದರೆ ಸರಿ. ವಾದಿಪರವಾಗಿ ವಾದ ಮಂಡನೆ ಪೂರ್ಣಗೊಂಡಿದ್ದು ನಮ್ಮ ಪರವಾಗಿ ಭಾಗಶಹ ವಾದ ಮಂಡನೆ ಸಮಯದಲ್ಲಿದ್ದಾಗ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾಖಲೆಗಳನ್ನು ಹಾಜರು ಪಡಿಸಿ ದಾವೆಯ ವಿಳಂಬಕ್ಕೆ ಕಾರಣನಾಗುತಿದ್ದೇನೆ ಎಂದರೆ ಸರಿಯಲ್ಲ. ಮೂಲ ದಾವಾ ನಂ.1339/2014ರ ದಾವೆಯಲ್ಲಿ ನನ್ನ ತಂದೆ ಜ್ಯೋತಿಬಾ ಹಾಗೂ ನನ್ನ ತಾಯಿ ಕೃಷ್ಣ ಬಾಯಿ 1 ಮತ್ತು 2 ನೇ ಪ್ರತಿವಾದಿಗಳಾಗಿ ಪಕ್ಷಗಾರರಾಗಿದ್ದು ಸದರಿ ದಾವೆ ಚಾಲ್ತಿಯಲ್ಲಿರುವಾಗ ಇಬ್ಬರು ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಸದರಿ ನಮ್ಮ ತಾಯಿ ತೀರಿಕೊಂಡ ನಂತರ ಅವರ ಎಲ್ಲಾ ಸರಳ ವಾರಸುದಾರರಾದ ನಮ್ಮ ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

**(ಮರು ವಿಚಾರಣೆ ಇರುವುದಿಲ್ಲ)**

**(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯನ್ನು ಯಥಾವತ್ತಾಗಿ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸರಿಯಿದೆ.**

**Sd/-**

**2 ನೇ ಹೆಚ್ಚುವರಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.**

**ಬೆಳಗಾವಿ**